ಇಟ್ಟು ಕಣ್ಣೀರಿಟ್ಟಳು. ಆಲ್ಬರ್ಟ್ ಕೂಡ ಖುಷಿಯಿಂದ ಅವಳ ಬೆನ್ನು ಸವರತೊಡಗಿದ.

"ಆಲ್ಬರ್ಟ್, ಮುಂದಿನ ಫೀಡ್ ಹೊತ್ತಿಗೆ ನೀನು ಬರಲೇ ಬೇಕು!" ಅವನಿಗೆ ಮತ್ತೊಂದು ಮುತ್ತನ್ನೊತ್ತಿ ಅವಳು ಮನೆಯ ಕಡೆಗೆ ದೌಡಾಯಿಸಿದಳು.

ಮುಂದಿನ, ಆರು ಗಂಟೆಯ ಹೊತ್ತಿನ ಫೀಡಿಗೆ ವಾತಾವರಣದಲ್ಲಿ ಅನಿಶ್ಚಿತತೆ ಮನೆ ಮಾಡಿತ್ತು. ಅವರಿಬ್ಬರೂ ಐದೂವರೆಯಿಂದಲೇ ಈ ಗಳಿಗೆಗೆ ಕಾದು ಕುಳಿತಿದ್ದರು. ಫೀಡಿಂಗ್ ಬಾಟಲು ಬೆಚ್ಚನೆಯ ನೀರಿನ ಹರಿವಾಣದಲ್ಲಿ ವಿಶ್ರಮಿಸುತ್ತಿದ್ದರೆ, ಮಗು ತೊಟ್ಟಿಲಲ್ಲಿ ಸ್ವಸ್ಥವಾಗಿ ಮಲಗಿತ್ತು.

ಆರು ಗಂಟೆಗೆ ಇಪ್ಪತ್ತು ನಿಮಿಷಗಳಿದ್ದಾಗಲೇ ಮಗು ಎಚ್ಚೆತ್ತುಗೊಂಡು ಅರಚಿಕೊಳ್ಳಲು ಶುರುವಿಟ್ಟುಕೊಂಡಿತು.

"ಪಾಪ, ತುಂಬಾ ಹಸಿದಿರಬೇಕು ಆಲ್ಬರ್ಟ್! ಎಲ್ಲಿ, ಫೀಡಿಂಗ್ ಬಾಟಲ್ ನನ್ನ ಕೈಗೆ ಕೊಟ್ಟು ಮಗೂನ ಮೆಲ್ಲಗೆ ನನ್ನ ಮಡಿಲಿಗೆ ಇಡುತ್ತೀಯಾ?"

ಆಲ್ಬರ್ಟ್ ಹಾಗೆ ಮಾಡಿದ್ದೇ... ಮೇಬಲ್ ನಿಪ್ಪಲನ್ನು ಮಗುವಿನ ಬಾಯಿಗಿಡುವುದೇ ತಡ, ಅದು ಸೊರ ಸೊರನೇ ಹಾಲನ್ನು ಎಳೆಯತೊಡಗಿತು.

ಅವರು ನೋಡನೋಡುತ್ತಿದ್ದಂತೇ ಆರೇಳು ನಿಮಿಷಗಳಲ್ಲೇ ಬಾಟಲಿ ಖಾಲಿಯಾಗಿ ಬಿಟ್ಟಿತು.

"ಒಹ್ ಮೈ ಬೇಬಿ!... ಮತ್ತೆ ನಾಲ್ಕು ಔನ್ಸ್!!" ಮೇಬಲ್ ಕುಣಿಯುವುದಷ್ಟೇ ಬಾಕಿ.

ಮಗುವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಆಲ್ಬರ್ಟ್ ಹೇಳಿದ: "ಮೇಬಲ್, ಮಗುವಿನ ತೂಕ ಹೆಚ್ಚಾಗಿದೆ ಅಂತ ನನಗನಿಸುತ್ತಿದೆ. ಏನಂತೀಯಾ?"

"ಅದೆಲ್ಲಾ ಗಮನಿಸುವುದಕ್ಕೆ ನಾನು ಹೋಗಿಲ್ಲ ಆಲ್ಬರ್ಟ್. ಮಗು ಹಾಲು ಕುಡಿಯಲು ಶುರು ಮಾಡಿತು ಅನ್ನವುದಷ್ಟೇ ನನಗೆ ದೊಡ್ಡ ಸಮಧಾನ." ಮೇಬಲ್ ಹೇಳಿದಳು.

"ಅದರ ಬಗ್ಗೆ ಇನ್ನು ಚಿಂತೆಯೇ ಬೇಡ ಮೇಬಲ್..." ಎಂದ ಆಲ್ಬರ್ಟ್.

"ತೊಟ್ಟಿಲನ್ನು ನಿನ್ನ ಕೋಣೆಯೊಳಗೇ ಇಡಲೇ ಮೇಬಲ್?" ಆಕೆ ಆಯ್ತು ಎನ್ನುವಂತೆ ಸಮ್ಮತಿ ಸೂಚಿಸಿದಾಗ ಅವನು ಅದನ್ನೆತ್ತಿಕೊಂಡು ಮೆಟ್ಟಿಲುಗಳನ್ನು ಹತ್ತಿದ. ಅವನ ಹಿಂದೆಯೇ ಮೇಬಲ್ ಮೇಲತ್ತಿ ಮಗುವನ್ನು ತೊಟ್ಟಿಲಲ್ಲಿಟ್ಟು ಬ್ಲ್ಯಾಂಕೆಟ್ಟನ್ನು ಹೊದಿಸಿದಳು.

"ನಮ್ಮ ಮಗು ಹೇಗೆ ಕಾಣಿಸುತ್ತೆ ಆಲ್ಬರ್ಟ್? ಇಡೀ ಪ್ರಪಂಚದಲ್ಲಿ ನಮ್ಮ ಮಗುವಿನಷ್ಟು ಸುಂದರವಾದ ಮಗು ಬೇರೊಂದಿಲ್ಲ ಅಂತ ನಿನಗನಿಸುವುದಿಲ್ಲವೇ?" ಮೇಬಲ್ ಬೇರೆಯೇ ಪ್ರಪಂಚದಲ್ಲಿದ್ದಳು.

"ಸಂಶಯವೇ ಇಲ್ಲ ಮೇಬಲ್. ನಡಿ, ನಾವು ಕೆಳಗೆ ಹೋಗಿ ಊಟ ಮಾಡೋಣ. ಮಗು ನಿದ್ರಿಸಲಿ. ನನಗೂ ಹಸಿವಾಗ್ತಿದೆ." ಎಂದ.

★★★

ಊಟ ಮುಗಿಸಿದ ನಂತರ ಅವರು ಹಾಲಿಗೆ ಬಂದು ಹರಟುತ್ತಾ ಕುಳಿತುಕೊಂಡರು. ಆಲ್ಬರ್ಟ್ ತನ್ನ ಪೈಪನ್ನು ಹೊರತೆಗೆದು ತಂಬಾಕು ತುಂಬಿಸಿಕೊಳ್ಳುತ್ತಾ ಪಕ್ಕದಲ್ಲಿದ್ದ ನಿಯತಕಾಲಿಕವನ್ನು ಎತ್ತಿಕೊಂಡ. ಮೇಬಲ್ ಹೆಣಿಗೆಯ ಕಡ್ಡಿಗಳನ್ನು ಎತ್ತಿಕೊಂಡಳು. ಕಳೆದ ರಾತ್ರಿಗೆ ಹೋಲಿಸಿದರೆ ಇವತ್ತಿನ ರಾತ್ರಿ ನಿರಾಳವಾಗಿತ್ತು. ಮೇಬಲಳ ಸುಂದರ ಮುಖದಲ್ಲಿ ದುಗುಡ ಮಾಯವಾಗಿ ನೆಮ್ಮದಿಯ ಗುಲಾಬಿ ರಂಗು ಪಸರಿಸಿತ್ತು. ಅವಳ ಕಣ್ಣುಗಳು ಮಿಂಚುತ್ತಿದ್ದವು. ತುಟಿಗಳು ಮಂದಹಾಸದಿಂದ ಬಿರಿದಿದ್ದವು. ಅವಳು ಆಗಾಗ್ಗೆ ಸಂತೃಪ್ತಿಯಿಂದ ತನ್ನ ಗಂಡನೆಡೆಗೆ ಹೆಮ್ಮೆಯ ನಗು ಸೂಸುತ್ತಿದ್ದಳು. ಅಲ್ಲದೆ ಹೆಣಿಗೆಯನ್ನು ನಿಲ್ಲಿಸಿ ಮೇಲಿಂದ ಮಗು ಅಳುತ್ತಿರುವ ಸದ್ದು ಏನಾದರೂ ಕೇಳುತ್ತಿದೆಯೇ ಎಂದು ಕಿವಿಗೊಡುತ್ತಿದ್ದಳು. ಆದರೆ ಹಾಗೇನೂ ಆಗಲಿಲ್ಲ.